# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2133 (2417) |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 27/03/2026 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನ ಪರಿಶೀಲನೆಯ ಸಂದರ್ಭದಲ್ಲಿ, ನೈಜ ಕಟ್ಟಡ ಕಾರ್ಮಿಕರಾಗಿದ್ದರೂ ಸಹ ಮಂಡಳಿ ಪರಿಶೀಲಿಸುವ ತಂತ್ರಾಂಶಗಳಿಂದ ಬೇರೆ ವೃತ್ತಿ ಕಂಡು ಬರುವ ಕಾರ್ಮಿಕರ ಮಕ್ಕಳ ಅರ್ಜಿಗಳನ್ನು ಅತಾರ್ತಿಕವಾಗಿ ತಿರಸ್ಕೃತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಫಲಾನುಭವಿಗಳ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಧನಸಹಾಯವನ್ನು ನೀಡಲಾಗುತ್ತಿದ್ದು, ಇ-ಆಡಳಿತ ಇಲಾಖೆಯ ಸ್ಟೇಟ್ ಸ್ಕಾಲರ್‌ಶಿಪ್ ಪೋರ್ಟಲ್(ಎಸ್ ಎಸ್ ಪಿ) ಮೂಲಕ ಮಂಡಳಿಯ ಫಲಾನುಭವಿಗಳಿಗೆ ಶೈಕ್ಷಣಿಕ ಧನಸಹಾಯವನ್ನು ನೀಡಲಾಗುತ್ತಿದೆ. ಸದರಿ ಪೋರ್ಟಲ್‌ನಲ್ಲಿ ನಿಯಮಾನುಸಾರ ಅರ್ಹರಿರುವ ಮಂಡಳಿಯ ಎಲ್ಲಾ ಫಲಾನುಭವಿಗಳು ಅರ್ಜಿಯನ್ನು ಸಲ್ಲಿಸಲು ಮುಕ್ತ ಅವಕಾಶವನ್ನು ನೀಡಲಾಗುತ್ತಿದೆ. |
| ಆ) | ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಮಂಡಳಿ ಪರಿಶೀಲಿಸುವ ತಂತ್ರಾಂಶಗಳಿಂದ ಬೇರೆ ವೃತ್ತಿ ಕಂಡು ಬರುವ ಕಾರ್ಮಿಕರ ಮಕ್ಕಳ ಅರ್ಜಿಯನ್ನು ತಿರಸ್ಕೃತಗೊಳಿಸುವ ಮೊದಲು ಕಾರ್ಮಿಕರ ನೈಜತೆಯ ಮರು ಪರಿಶೀಲನೆಗೆ ಆಯಾಯ ತಾಲ್ಲೂಕಿನ ಕಾರ್ಮಿಕ ಇಲಾಖಾ ಕಛೇರಿಗಳಿಗೆ ಸದರಿ ಅರ್ಜಿಗಳನ್ನು ಕಳುಹಿಸಿ, ಕೂಲಂಕುಷವಾಗಿ ಮರು ಪರಿಶೀಲನೆ ಮಾಡಿ, ನೈಜ ಕಟ್ಟಡ ಕಾರ್ಮಿಕರ ಮಕ್ಕಳು ಸದರಿ ಸೌಲಭ್ಯ ಪಡೆಯುವುದರಿಂದ ವಂಚಿತರಾಗುವುದನ್ನು ತಪ್ಪಿಸಲು | ಮಂಡಳಿಯ ತಂತ್ರಾಂಶವನ್ನು ಕುಟುಂಬ ತಂತ್ರಾಂಶದ ಜೊತೆ ಜೋಡಣೆ ಮಾಡಲಾಗಿದ್ದು, ಸದರಿ ಕುಟುಂಬ ತಂತ್ರಾಂಶದ ಮೂಲಕ ಅರ್ಜಿದಾರರ ವೃತ್ತಿಯನ್ನು ಪರಿಶೀಲಿಸಲಾಗುತ್ತಿದೆ.<br><br>ಕುಟುಂಬ ತಂತ್ರಾಂಶದಲ್ಲಿ ಅರ್ಜಿದಾರರ ವೃತ್ತಿಯು ಕಟ್ಟಡ ಕಾರ್ಮಿಕ ಎಂದು ನಮೂದಾಗಿದ್ದಲ್ಲಿ ಮಂಡಳಿಯಿಂದ ನೇರವಾಗಿ ಫಲಾನುಭವಿಗಳ ಖಾತೆಗೆ ಶೈಕ್ಷಣಿಕ ಧನಸಹಾಯವನ್ನು ಪಾವತಿಸಲಾಗುತ್ತಿದೆ ಹಾಗೂ ಕಟ್ಟಡ ಕಾರ್ಮಿಕ ವೃತ್ತಿಯ ಜೊತೆ ಯಾವುದೇ ವೃತ್ತಿಯು ಜೋಡಣೆಯಾಗಿದ್ದಲ್ಲಿ ಮತ್ತು ವೃತ್ತಿಯು ನಮೂದಾಗಿರದ ಅರ್ಜಿಗಳನ್ನು ಸಂಬಂಧಪಟ್ಟ ಕಾರ್ಮಿಕ ನಿರೀಕ್ಷಕರುಗಳಿಂದ ಪರಿಶೀಲಿಸಿ ವಿಲೇವಾರಿ ಮಾಡಲು ಕ್ರಮವಹಿಸಲಾಗುತ್ತಿದೆ. ಕಟ್ಟಡ ಕಾರ್ಮಿಕರಲ್ಲದ ವೃತ್ತಿಯ ಅರ್ಜಿಯನ್ನು ತಿರಸ್ಕರಿಸಲಾಗುತ್ತದೆ. |

| | | |
|---|---|---|
| | ಅಗತ್ಯ ಹಾಗೂ ಸೂಕ್ತ ಕ್ರಮ ವಹಿಸಲಾಗುವುದು; | 2023-24ರ ಸಾಲಿನಿಂದ ಕುಟುಂಬ ತಂತ್ರಾಂಶದಲ್ಲಿ ಅರ್ಜಿದಾರರ ವೃತ್ತಿಯು ಕಟ್ಟಡ ಕಾರ್ಮಿಕ, ಕಟ್ಟಡ ಕಾರ್ಮಿಕ ವೃತ್ತಿಯ ಜೊತೆ ಯಾವುದೇ ವೃತ್ತಿಯು ಜೋಡಣೆಯಾಗಿದ್ದಲ್ಲಿ ಮತ್ತು ವೃತ್ತಿಯು ನಮೂದಾಗಿರದ ಅರ್ಜಿಗಳಿಗೆ ಯಾವುದೇ ಪರಿಶೀಲನೆಗೆ ಒಳಪಡಿಸದೇ ನೇರವಾಗಿ ಮಂಡಳಿಯಿಂದ ಫಲಾನುಭವಿಗಳ ಖಾತೆಗೆ ಪಾವತಿಸಲಾಗುತ್ತಿದೆ. |
| ಇ) | ಮಂಡಳಿಯು ನೂತನವಾಗಿ ಅಭಿವೃದ್ಧಿ ಪಡಿಸಿದ ತಂತ್ರಾಂಶದಲ್ಲಿ ತಾಂತ್ರಿಕ ದೋಷ ಇದ್ದ ಕಾರಣ, (ದಿನಾಂಕ: 17-10-2023 ರಿಂದ ದಿನಾಂಕ: 10-06-2024ರವರೆಗೆ ಕಾರ್ಮಿಕರಿಗೆ ತಮ್ಮ ಗುರುತಿನ ಚೀಟಿಯ ನವೀಕರಣ ಮಾಡಲು ಸಾಧ್ಯವಾಗಿರುವುದಿಲ್ಲ. ಆ ಕಾರಣದಿಂದಾಗಿ ಹಲವಾರು ಕಾರ್ಮಿಕರು ಮದುವೆಯ ಸಹಾಯಧನ ಸೇರಿದಂತೆ ವಿವಿಧ ಸಹಾಯಧನಗಳಿಗೆ ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸಲು ಸಾಧ್ಯವಾಗದೆ ಸೌಲಭ್ಯಗಳಿಂದ ವಂಚಿತರಾಗಿದ್ದು, ಆ ಸಂಬಂಧ ಹಲವಾರು ಕಾರ್ಮಿಕರಿಗೆ ಅನ್ಯಾಯವಾಗಿರುವುದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮವಹಿಸಲಿದೆ? | ದಿನಾಂಕ:17/10/2023 ರಿಂದ 10/06/2024ರ ವರೆಗೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೂತನ ತಂತ್ರಾಂಶವು ಅಭಿವೃದ್ಧಿಪಡಿಸುವ ಸಲುವಾಗಿ ಹಾಗೂ ತಾಂತ್ರಿಕ ದೋಷಗಳ ನಿಮಿತ್ತ ಅರ್ಜಿಗಳು ಸ್ವೀಕೃತಿವಾಗುತ್ತಿರಲಿಲ್ಲ.<br><br>ಈ ಕಾರಣಕ್ಕಾಗಿ ದಿನಾಂಕ: 10/06/2024 ರಂದು ಸುತ್ತೋಲೆಯನ್ನು ಹೊರಡಿಸಲಾಗಿದ್ದು, ದಿನಾಂಕ: 11/06/2024 ರಿಂದ 30/09/2024ರವರೆಗೆ ಅರ್ಜಿ ಸಲ್ಲಿಸಲು ಸಾಧ್ಯವಾಗದ ಫಲಾನುಭವಿಗಳಿಗೆ ಹೆಚ್ಚುವರಿ ಕಾಲಾವಕಾಶವನ್ನು ನೀಡಲಾಗಿರುತ್ತದೆ ಅದರಂತೆ, ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಕಾರ್ಮಿಕ ಅಧಿಕಾರಿಗಳಿಗೆ ಸದರಿ ಮಾಹಿತಿಯನ್ನು ನೀಡಿ ಮಂಡಳಿಯ ವೆಬ್-ಸೈಟ್ ನಲ್ಲಿಯೂ ಸಹ ಪ್ರಕಟಿಸಲಾಗಿರುತ್ತದೆ. ಈ ಸಮಯದಲ್ಲಿ ಹಲವಾರು ಫಲಾನುಭವಿಗಳು ಸೌಲಭ್ಯವನ್ನು ಪಡೆದಿರುತ್ತಾರೆ. |

**ಕಾಇ 164 ಎಲ್ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**